ವಿಶ್ವಕರ್ಮ ಮಹಾಮಂಡಲ ಸಮಾವೇಶದ ಅಂಗವಾಗಿ ನಗರದ ಬನಶಂಕರಿಯಲ್ಲಿ ಹಮ್ಮಿಕೊಂಡಿದ್ದ ರಥೋತ್ಸವದಲ್ಲಿ ನಿವೃತ್ತ ಐಎಎಸ್ ಅಧಿಕಾರಿ ವೀರಭದ್ರ, ರಾಜ್ಯಾಧ್ಯಕ್ಷ ನಾಗರಾಜಾಚಾರ್ ಹಾಗೂ ಇತರರು ಭಾಗವಹಿಸಿದ್ದರು.

ಕೆಂಗೇರಿಯಲ್ಲಿ ನಾಳೆ ಪ್ರತಿಭಾ ಪುರಸ್ಕಾರ

ಬೆಂಗಳೂರು, ಸೆ. ೧೭- ಕೆಂಗೇರಿ ಉಪ ನಗರದ ಬ್ರಾಹ್ಮಣ ಸಭಾದ ವತಿಯಿಂದ ನಾಳೆ ಸಂಜೆ 5.30ಕ್ಕೆ ಕೆಂಗೇರಿಯಲ್ಲಿರುವ ಗಾಯತ್ರಿ ಮಂದಿರದಲ್ಲಿ "ಎಲ್ಲಾ ವರ್ಗದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ" ಸಮಾರಂಭವನ್ನು ಏರ್ಪಡಿಸಲಾಗಿದೆ.

ಕಾರ್ಯಕ್ರಮವನ್ನು ರಂಗನಟರಾದ ಮಾಸ್ಟರ್ ಹಿರಣ್ಣಯ್ಯನವರು ಉದ್ಘಾಟನೆ ಮಾಡಲಿದ್ದಾರೆ. ಎಂ.ಇ.ಎಸ್ ಕಿಶೋರ್ ಕೇಂದ್ರದ ಪ್ರಾಂಶುಪಾಲರಾದ ವಿದ್ಯಾವಲ್ಲಭ, ಪ್ರೊ. ಆರ್.ಕೆ. ಪ್ರಹ್ಲಾದ್‌ರಾವ್‌ರವರು ಪ್ರತಿಭಾ ಪುರಸ್ಕಾರ ವಿತರಣೆ ಮಾಡಲಿದ್ದಾರೆ.

ಸಂಘದ ಎಚ್.ಎಸ್. ಸುಧೀಂದ್ರ ಕುಮಾರ್‌ರವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ದೂ. 9845265199, 9480429897 ಅನ್ನು ಸಂಪರ್ಕಿಸಬಹುದು.

ನಗರದ ಕ್ವೀನ್ಸ್ ರಸ್ತೆಯಲ್ಲಿ ಆಧುನೀಕರಣಗೊಳಿಸಿರುವ ಜಸ್ಮಾ ಭವನವನ್ನು ಶಾಸಕ ರಘು, ಮಾಜಿ ಉಪ ಮೇಯರ್ ದಯಾನಂದ್ ನೇತೃತ್ವದ ತಂಡ ಇಂದು ಪರಿಶೀಲಿಸಿತು.

ಹೂಡಿಕೆದಾರರಿಗೆ ಪಂಗನಾಮ ಭಾರತೀಯ ಉದ್ಯಮಿ ಬಂಧನ

ನ್ಯೂಯಾರ್ಕ್, ಸೆ. ೧೭- ಭಾರತೀಯ ವಾಣಿಜ್ಯೋದ್ಯಮಿಯೊಬ್ಬರನ್ನು ಹೂಡಿಕೆದಾರರಿಗೆ 20 ಲಕ್ಷದ 40 ಸಾವಿರ ಡಾಲರ್ ವಂಚಿಸಿರುವ ಹಿನ್ನೆಲೆಯಲ್ಲಿ ಬಂಧಿಸಲಾಗಿದ್ದು, ಅವರಿಗೆ 20 ವರ್ಷಗಳ ಜೈಲು ಶಿಕ್ಷೆ ವಿಧಿಸುವ ಸಂಭವವಿದೆ.

ಕ್ಯಾಲಿಫೋರ್ನಿಯಾದಲ್ಲಿರುವ ಜನಮ್‌ಜೇಟ್ ಸಿಂಗ್ ಸೋಧಿ ಎಂಬುವರನ್ನು ಬಂಧಿಸಲಾಗಿದೆ ಎಂದು ಅಮೆರಿಕದ ಅಟಾರ್ನಿ ಬೆಂಜಮಿನ್ ವ್ಯಾಗ್ನರ್ ಹೇಳಿದ್ದಾರೆ.

ಎಲೈಟ್ ಫೈನಾನ್ಸಿಯಲ್ ಇನ್ಕಾರ್ಪೊರೇಟೆಡ್ ಎಂಬ ಸಂಸ್ಥೆ ಮಾಲೀಕರಾದ ಸೋಧಿ ಹೂಡಿಕೆ ಅವಕಾಶಗಳಿಗಾಗಿ ತನಗೆ ಹಣ ನೀಡುವಂತೆ ಹೂಡಿಕೆದಾರರಿಗೆ ಹೇಳಿ ಹಣ ಪಡೆದು, ಹಿಂದಿನ ಹೂಡಿಕೆದಾರರಿಂದ ಪಡೆದಿದ್ದ ಹಣ ಹಿಂದಿರುಗಿಸಲು ಹಾಗೂ ವೈಯಕ್ತಿಕ ವೆಚ್ಚಗಳಿಗಾಗಿ ಈ ಹಣವನ್ನು ಬಳಸಿದ್ದರು.

ತರಂಗ್ ಬಾಂಡ್ ನಾಳೆ ಉದ್ಘಾಟನೆ

ಬೆಂಗಳೂರು, ಸೆ. ೧೭- ಸ್ಟುಡಿಯೊ ಫೋಕಸ್ ಎಂಟರ್‌ಟೈನ್‌ಮೆಂಟ್ (ಇಂಡಿಯಾ) ಪ್ರೈ. ಲಿಮಿಟೆಡ್ ನಾಳೆ ಸಂಜೆ 7 ಗಂಟೆಗೆ ಮ್ಯೂಸಿಕಲ್ ಬಾಂಡ್ "ತರಂಗ್" ಉದ್ಘಾಟನೆ ಆಗಲಿದೆ.

ಕೋರಮಂಗಲದ ಎನ್‌ಜಿವಿ ಕ್ಲಬ್‌ನಲ್ಲಿ "ತರಂಗ್" ಬಾಂಡ್ ಉದ್ಘಾಟಿಸಲಾಗುವುದೆಂದು ಪ್ರಕಟಣೆ ತಿಳಿಸಿದೆ.

ಗಾಯಕಿ ಇಂಚರ ಸೇರಿದಂತೆ, ಇನ್ನಿತರೆ ಹಾಡುಗಾರರ ಸಹಯೋಗದಲ್ಲಿ ಮ್ಯೂಸಿಕಲ್ ಬಾಂಡ್ "ತರಂಗ್" ಪ್ರಾರಂಭಿಸಲಾಗಿದ್ದು, ಇದರ ಮೂಲಕ ಕನ್ನಡ ಹಾಗೂ ಹಿಂದಿ ಗೀತೆಗಳ ರೀಮಿಕ್ಸ್ ಗಾಯನ ನಡೆಯಲಿದೆ ಎಂದು ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಎನ್.ಎಂ. ನಿರಂಜನ ತಿಳಿಸಿದ್ದಾರೆ. ನಾಳೆ ನಡೆಯಲಿರುವ ಬಾಂಡ್ ಉದ್ಘಾಟನೆಗೆ ಸಿನಿಮಾ ತಾರೆಯರು, ಸಂಗೀತಗಾರರು ಭಾಗವಹಿಸಲಿದ್ದಾರೆ ಎಂದಿದ್ದಾರೆ.

ತರಬೇತಿ ಜೆಟ್ ವಿಮಾನ ಖರೀದಿ 2,900ಕೋಟಿ ರೂ. ವ್ಯವಹಾರ

ನವದೆಹಲಿ, ಸೆ. ೧೭- ಭಾರತ ಶೀಘ್ರದಲ್ಲಿಯೇ 2,900 ಕೋಟಿ ರೂ.ಗಳ ಬಹುದೊಡ್ಡ ತರಬೇತಿ ಯುದ್ಧ ವಿಮಾನಗಳ ಕೊಳ್ಳುವಿಕೆ ಒಪ್ಪಂದಕ್ಕೆ ಸಹಿ ಹಾಕಲಿದೆ. ಹೋರಾಟ ವಿಮಾನಗಳ ಯುವ ಪೈಲಟ್‌ಗಳ ತರಬೇತಿಗಾಗಿ 75 ಸ್ವಿಸ್ ಪಿಲಾಟಸ್ ಪಿಸಿ.7 ಟುಬ್ರೊ ಪ್ರಾಥಮಿಕ ತರಬೇತಿ ಜೆಟ್‌ಗಳನ್ನು ಕೊಳ್ಳುವ ಒಪ್ಪಂದ ಅಂತಿಮ ಘಟ್ಟದಲ್ಲಿದೆ.

ಈ ಸಂಬಂಧದಲ್ಲಿ ಇದರ ಅನುಮೋದನೆ ಹಿನ್ನೆಲೆಯಲ್ಲಿ ಸಂಪುಟ ಸಮಿತಿ ಮಂಡಿಸುವ ಟಿಪ್ಪಣಿಗಳನ್ನು ಸಿದ್ಧ ಮಾಡಲಾಗಿದೆ.ಈ ಹಿನ್ನೆಲೆಯಲ್ಲಿ ಈ ಒಪ್ಪಂದಕ್ಕೆ ಇದೇ ವರ್ಷಾಂತ್ಯದ ಒಳಗೆ ಸಹಿ ಬೀಳುವ ಸಂಭವವಿದೆ.

ಇದೇ ವೇಳೆ 42,000 ಕೋಟಿ ವೆಚ್ಚದ 126 ಮಧ್ಯಮ ಕ್ರಮಾಂಕದ ಬಹುಉಪಯೋಗಿ ಯುದ್ಧ ವಿಮಾನಗಳನ್ನುಕೊಳ್ಳುವ ಯೋಜನೆ ಸರ್ಕಾರದ ಮುಂದಿದೆ.

ಬಹುಶಃ ಇದರ ಸಂಬಂಧಿತ ಒಪ್ಪಂದ ಮುಂದಿನ ವರ್ಷ ಜನವರಿ, ಫೆಬ್ರವರಿಯಲ್ಲಿ ಏರ್ಪಡಿಸಬಹುದು ಎಂದು ರಕ್ಷಣಾ ಸಚಿವಾಲಯದ ಮೂಲಗಳು ತಿಳಿಸಿವೆ.

ಪದ್ಮನಾಭಸ್ವಾಮಿ ಖಜಾನೆ ಕಾವಲಿಗೆ ತಿಂಗಳಿಗೆ 1ಕೋಟಿ ರೂ. ವೆಚ್ಚ

ನವದೆಹಲಿ, ಸೆ. ೧೭- ಕೇರಳದ ಶ್ರೀ ಪದ್ಮನಾಭಸ್ವಾಮಿ ದೇವಾಲಯದ ಭದ್ರತೆಗೆ ಸರ್ಕಾರ ಪ್ರತಿ ತಿಂಗಳು ಒಂದು ಕೋಟಿ ರೂ. ವ್ಯಯಿಸುತ್ತಿದೆ ಎಂದು ಕೇರಳ ಸರ್ಕಾರ ಸುಪ್ರೀಂಕೋರ್ಟ್‌ಗೆ ಮಾಹಿತಿ ನೀಡಿದೆ.

ರಾಜ್ಯ ಸರ್ಕಾರದ ಪರವಾಗಿ ಸುಪ್ರೀಂಕೋರ್ಟ್ ಪೀಠದ ಎದುರು ಹಾಜರಾದ ಲಿಝ್ ಮ್ಯಾಥ್ಯೂ ಭದ್ರತೆಯ ಬಗ್ಗೆ ಅಫಿಡೆವಿಟ್ ಸಲ್ಲಿಸಿ ಈ ಮಾಹಿತಿ ನೀಡಿದರು.

ಸರ್ಕಾರ ದೇವಾಲಯದ ಸುರಕ್ಷತೆಗೆ ತನ್ನದೇ ಆದ ರೀತಿಯಲ್ಲಿ ಭದ್ರತೆ ಒದಗಿಸಿದೆ ಎಂದು ಅವರು ಹೇಳಿದರು.

ಆದಾಗ್ಯೂ ದೇವಾಲಯದ ಭದ್ರತೆಗೆ ವ್ಯಯಿಸಲಾಗುತ್ತಿರುವ ವೆಚ್ಚವನ್ನು ಕಡಿಮೆ ಮಾಡಬೇಕೆಂದು ತಜ್ಞರ ಸಮಿತಿ ಬೇರೆ ರೀತಿಯಲ್ಲಿ ಚಿಂತಿಸುತ್ತಿದೆ ಎಂದೂ ಮ್ಯಾಥ್ಯೂ ಹೇಳಿದರು.

ದೇವಾಲಯದ ಭದ್ರತೆಯನ್ನು ಇನ್ನೆರಡು ತಿಂಗಳಲ್ಲಿ ಒದಗಿಸಲು ಸಾಧ್ಯವಾಗಲಿದೆಯೇ ? ಎಂದು ನ್ಯಾಯಮೂರ್ತಿ ರವೀಂದ್ರನ್ ಕೇಳಿದರು.

ದೇವಾಲಯದ ಭದ್ರತೆಗೆ ಸಂಬಂಧಿಸಿ ಸರ್ಕಾರ ತನ್ನ ಕ್ರಮವನ್ನು ಮಿತಿಗೊಳಿಸಲು ಆಲೋಚಿಸಿದೆ ಎಂದು ತಿರುವಾಂಕೂರು ಮಾರ್ತಾಂಡ ವರ್ಮಾರವರ ಪರವಾಗಿ ಹಾಜರಾದ ಹಿರಿಯ ವಕೀಲ ಕೆ.ಕೆ. ವೇಣುಗೋಪಾಲ್ ಹೇಳಿದರು.

"ನೀವು ಭದ್ರತೆಯ ಶೇ. 99 ರಷ್ಟು ಹಣವನ್ನು ವ್ಯಯಿಸಿ ದೇವಾಲಯ ಶೇ. 1 ರಷ್ಟು ಹಣವನ್ನು ನೀಡಲಿದೆ ಎಂದು ಸರ್ಕಾರದ ಪೀಠ ಹೇಳಿತು.

ಇದರಿಂದ ಕೋರ್ಟ್ ಆವರಣದಲ್ಲಿ ನಗೆಯ ಅಲೆಯು ಮೂಡಿಬಂತು. ಅಷ್ಟು ಹಣವನ್ನು ಎಲ್ಲಿಂದ ತರಲಿ ? ಎಂದು ವಕೀಲರು ಪ್ರಶ್ನಿಸಿದರು. ಹಿರಿಯ ವಕೀಲ ಪಿ.ಪಿ. ರಾವ್‌ವಾದ ಮಂಡಿಸಿ ದೇವಾಲಯದ ಸಂಪತ್ತಿನ ರಕ್ಷಣೆಗೆ ಭದ್ರತೆ ಒದಗಿಸುವುದು ಅಗತ್ಯವಾಗಿದೆ ಎಂದು ಹೇಳಿದರು.

ಕೇರಳ ಕ್ಷೇತ್ರ ಸಮಿತಿಯ ಪರವಾಗಿ ಹಾಜರಾದ ಹಿರಿಯ ವಕೀಲ ಎಂ.ಎನ್. ಕೃಷ್ಣಮನಿ ಜನರ ಭಾವನೆಗಳಿಗೆ ನೋವಾಗದ ರೀತಿಯಲ್ಲಿ ಭದ್ರತೆ ಒದಗಿಸುವಂತೆ ಪೀಠಕ್ಕೆ ಆಗ್ರಹಿಸಿದರು.

"ಈ ಬಗ್ಗೆ ನಾವು ಭರವಸೆ ನೀಡುತ್ತೇವೆ. ನಿಶ್ಚಿತ ಸ್ವರೂಪದ ಭದ್ರತೆಯನ್ನು ನಾವು ಒದಗಿಸುತ್ತೇವೆ ನಾವು ಯಾವುದೇ ಸಂಪ್ರದಾಯವನ್ನು ಮುರಿಯುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಅಗತ್ಯ ಕ್ರಮ ಕೈಗೊಳ್ಳಬೇಕಾಗುತ್ತದೆ" ಎಂದು ನ್ಯಾಯಮೂರ್ತಿ ರವೀಂದ್ರನ್ ಹೇಳಿದರು. ಪೊಲೀಸರು ದೇವಾಲಯದ ಒಳಗೆ ಪ್ರವೇಶಿಸುತ್ತಾರೆಯೇ ? ಎಂದು ವಕೀಲರು ಪ್ರಶ್ನಿಸಿದರು.

ಈ ಬಗ್ಗೆ ನಾವು ಬುಧವಾರ ಆದೇಶ ನೀಡುತ್ತೇವೆ ಎಂದು ಹೇಳಿ ವಿಚಾರಣೆಯನ್ನು ಮುಂದೂಡಿದರು.

ದೇವಾಲಯದಲ್ಲಿ ಪತ್ತೆಯಾಗಿರುವ ಸಂಪತ್ತು ಶ್ರೀ ಪದ್ಮನಾಭಸ್ವಾಮಿ ದೇವಾಲಯಕ್ಕೆ ಸೇರಿದೆ. ಈ ಸಂಪತ್ತಿನ ಮೇಲೆ ಯಾರು ಹಕ್ಕು ಸ್ಥಾಪಿಸ ಕೂಡದು ಎಂದು ಕೇರಳ ಸರ್ಕಾರ ಹೇಳಿದೆ. ಎಡಿಜಿಪಿ ಪೊಲೀಸ್ ಅಧಿಕಾರಿಯ ನೇತೃತ್ವದಲ್ಲಿ ದೇವಾಲಯಕ್ಕೆ ಭದ್ರತೆ ಒದಗಿಸಲಾಗಿದೆ. ಭದ್ರತೆಯ ಮೇಲೆ ಅವರು ನಿಗಾ ವಹಿಸಲಿದ್ದಾರೆ ಎಂದು ಸರ್ಕಾರ ಹೇಳಿದೆ.

ನಗರದ ಶಾಕಾಂಬರಿ ನಗರದಲ್ಲಿ ಇಂದು ಶಾಸಕ ವಿಜಯಕುಮಾರ್ "ಆಧಾರ್ ಚೀಟಿ ಕೇಂದ್ರ"ವನ್ನು ಉದ್ಘಾಟಿಸಿದರು. ಬಿಬಿಎಂಪಿ ಸದಸ್ಯ ಸೋಮಮಶೇಖರ್ ಹಾಗೂ ಇತರರು ಈ ಸಂದರ್ಭದಲ್ಲಿ ಹಾಜರಿದ್ದರು.

ಭ್ರಷ್ಟತೆ ಮುಚ್ಚಿಹಾಕಲು ರಥಯಾತ್ರೆ: ಕಟುಟೀಕೆ

ಬೆಂಗಳೂರು, ಸೆ. ೧೭- ಭ್ರಷ್ಟಾಚಾರದ ವಿರುದ್ಧ ಬಿಜೆಪಿ ಮುಖಂಡ ಎಲ್.ಕೆ. ಅಡ್ವಾಣಿ ನಡೆಸಲು ಉದ್ದೇಶಿಸಿರುವ ರಥಯಾತ್ರೆಯನ್ನು ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ತೀವ್ರವಾಗಿ ಖಂಡಿಸಿದೆ.

ಪತ್ರಿಕಾಗೋಷ್ಠಿಯಲ್ಲಿಂದು ಜಾತಿ ವಿನಾಶ ವೇದಿಕೆಯ ಅಧ್ಯಕ್ಷ ಲಕ್ಷ್ಮಣ್ ಮಾತನಾಡಿ, ಭ್ರಷ್ಟಾಚಾರದಲ್ಲಿ ತೊಡಗಿರುವವರೇ ಭ್ರಷ್ಟಾಚಾರದ ವಿರುದ್ಧದ ಹೋರಾಟಕ್ಕೆ ಮುಂದಾಗಿರುವುದು ದೇಶದ ದುರಂತವಾಗಿದೆ. ತಮ್ಮ ಭ್ರಷ್ಟತೆಯನ್ನು ಮುಚ್ಚಿಹಾಕಲು ಅಡ್ವಾಣಿ ಈ ರಥಯಾತ್ರೆಯ ಮೊರೆ ಹೋಗಿದ್ದಾರೆ. ಜನರ ಮನಸ್ಸನ್ನು ಬೇರೆಡೆ ತಿರುಗಿಸಲು ಈ ರಥಯಾತ್ರೆ ಹಮ್ಮಿಕೊಳ್ಳಲಾಗಿದೆ ಎಂದು ಆರೋಪಿಸಿದರು.

ಈ ಹಿಂದೆ ಅಡ್ವಾಣಿ ನಡೆಸಿರುವ ರಥಯಾತ್ರೆ ರಕ್ತ-ಸಿಕ್ತ ಇತಿಹಾಸವನ್ನು ಹೊಂದಿದೆ. ಮುಂದಿನ ರಥಯಾತ್ರೆಯಲ್ಲಿಯೂ ಇದನ್ನು ತಳ್ಳಿ ಹಾಕುವಂತಿಲ್ಲ. ಸಾವು-ನೋವು, ಸಾರ್ವಜನಿಕ ನಷ್ಟ ಉಂಟಾದರೆ, ಎಲ್.ಕೆ. ಅಡ್ವಾಣಿ ಹಾಗೂ ಬಿಜೆಪಿಯವರನ್ನೇ ಹೊಣೆಗಾರರಾಗಿ ಮಾಡಬೇಕು ಎಂದು ಆಗ್ರಹಿಸಿದ ಲಕ್ಷ್ಮಣ್, ಅಡ್ವಾಣಿಯವರ ರಥಯಾತ್ರೆ ಭ್ರಷ್ಟಾಚಾರವನ್ನು ಬೆಂಬಲಿಸಲು ಮಾಡಿದ ರಥಯಾತ್ರೆ ಎಂದು ಅವರು ವ್ಯಂಗ್ಯವಾಡಿದರು.

"ಕೋಮುವಾದಿಗಳು ಮೊದಲು ಸಾಮಾಜಿಕ ಭ್ರಷ್ಟಾಚಾರದ ವಿರುದ್ಧ ಹೋರಾಡಲಿ, ಇಲ್ಲವಾದರೆ ನಾವೂ ಬ್ರಹ್ಮಣವಾದಿಗಳೆಂದು ಒಪ್ಪಿಕೊಂಡು ರಥಯಾತ್ರೆಯನ್ನು ನಿಲ್ಲಿಸಲಿ" ಎಂದು ಲಕ್ಷ್ಮಣ್ ಸವಾಲೆಸೆದರು.

ಎಲ್.ಕೆ. ಅಡ್ವಾಣಿ ನಡೆಸಲು ಉದ್ದೇಶಿಸಿರುವ ರಥಯಾತ್ರೆಗೆ ಕೇಂದ್ರ ಸರ್ಕಾರ ಅನುಮತಿ ನಿರಾಕರಿಸಿ ದೇಶದ ಶಾಂತಿ-ಸೌಹಾರ್ದವನ್ನು ಕಾಪಾಡಬೇಕು ಎಂದು ಅವರು ಆಗ್ರಹಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಪಿಎಫ್‌ಐನ ಇಲ್ಯಾಸ್ ಮೊಹಮ್ಮದ್ ತುಂಬೆ, ದಲಿತ ಪ್ಯಾಂಥರ್ಸ್‌ನ ಚಂದ್ರಶೇಖರ್, ಆಲ್ ಇಮಾಮ್ಸ್ ಕೌನ್ಸಿಲ್‌ನ ಉಸ್ಮಾನ್‌ಬೇಗ್, ಸೈಯ್ಯದ್ ಸೈಫುಲ್ಲ, ಅಗ್ನಿ ಅಸ್ತ್ರ ಪತ್ರಿಕೆಯ ಆಂಜನಪ್ಪ ಉಪಸ್ಥಿತರಿದ್ದರು.

ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ರಾಷ್ಟ್ರೀಯ ಕುಟುಂಬ ಸೌಹಾರ್ದ ಸಂಘದ ಸದಸ್ಯರು ನಗರದ ಪುರಭವನದ ಎದುರು ಧರಣಿ ನಡೆಸಿದರು.

ಓಕಳಿಪುರಂ ನಿವಾಸಿಗಳು ನೀರಿಗಾಗಿ ನಡೆಸಿದ ಪ್ರತಿಭಟನೆ.

ಇತ್ತೀಚೆಗೆ ಕರ್ನಾಟಕ ರಾಜ್ಯ ಅಡುಗೆ ಕೆಲಸಗಾರರ ಹಾಗೂ ಸಹಾಯಕ ಕಾರ್ಮಿಕರ ಕ್ಷೇಮಾಭಿವೃದ್ಧಿ ಒಕ್ಕೂಟ ಮುಖ್ಯಮಂತ್ರಿ ಡಿ.ವಿ. ಸದಾನಂದಗೌಡರನ್ನು ಭೇಟಿ ಮಾಡಿ ಅಡುಗೆ ತಯಾರಕರ ಸಮ್ಮೇಳನ ಮತ್ತು ಇತರ ಸಮಸ್ಯೆಗಳನ್ನು ಕುರಿತು ಚರ್ಚಿಸಿದರು. ಮುಖಂಡರಾದ ಬಿ.ಎಸ್. ಸತ್ಯನಾರಾಯಣ, ಕೆ.ಎನ್. ಛಾಯಾಪತಿ, ನಾಗರಾಜ, ರಮೇಶ್ ಬಾಬು ಹಾಗೂ ನಾರಾಯಣಮೂರ್ತಿ ಇದ್ದಾರೆ.

ಬಿಹಾರದಲ್ಲಿ ಕಸ್ಟಡಿ ಸಾವು

ನವದೆಹಲಿ, ಸೆ. ೧೭- ಪೊಲೀಸ್ ಕಸ್ಟಡಿಯಲ್ಲಿ ಮಾರಣಾಂತಿಕವಾಗಿ ಹಲ್ಲೆ ನಡೆಸಿದ್ದರಿಂದ 22 ವರ್ಷ ಪ್ರಾಯದ ಯುವಕ ನೋರ್ವ ಸಾವಿಗೀಡಾದ ಅಮಾನವೀಯ ಘಟನೆಯೊಂದು ಬಿಹಾರದ ಸಿವಾನ್ ಜಿಲ್ಲೆಯಲ್ಲಿ ನಡೆದಿರುವುದು ಬೆಳಕಿಗೆ ಬಂದಿದೆ.

ಸಬ್‌ಇನ್ಸ್‌ಪೆಕ್ಟರ್ ಜಿತೇಂದ್ರ ತಿವಾರಿ ಎಂಬವರ ನಿವಾಸದಲ್ಲಿ ನಡೆದ ವಿಸಿಡಿ ಕಳ್ಳತನಕ್ಕೆ ಸಂಬಂಧಿಸಿ ಪೊಲೀಸರು, ಗೋವಿಂದನನ್ನು ಬಂಧಿಸಿದ್ದರು.

"ಮಧ್ಯರಾತ್ರಿ ಮನೆಯಿಂದ ಗೋವಿಂದನನ್ನು ಪೊಲೀಸರು ಕೊಂಡೊಯ್ದು ನಿರ್ದಾಕ್ಷಿಣ್ಯವಾಗಿ ಹಲ್ಲೆ ನಡೆಸಿದ್ದಾರೆ" ಎಂದು ಸಂತ್ರಸ್ತ ಕುಟುಂಬದವರು ಆರೋಪಿಸಿದ್ದಾರೆ.

"ಯುವಕ ಗೋವಿಂದನಿಗೆ ಕಸ್ಟಡಿಯಲ್ಲಿ ಮೂರನೇ ದರ್ಜೆಯ ಶಿಕ್ಷೆ ನೀಡಲಾಗಿದೆ. ಲಾಕಪ್‌ನಲ್ಲಿ ಆತ ಸಾಯುವವರೆಗೂ ಹೊಡೆಯಲಾಗಿದೆ" ಎಂದು ಯುವಕನ ಸಂಬಂಧಿಗಳು ಆರೋಪಿಸಿದ್ದಾರೆ.

ಆಕ್ರೋಶಿತ ಸ್ಥಳೀಯರು ಮೃತದೇಹವನ್ನು ಆಸ್ಪತ್ರೆಗೆ ಕೊಂಡೊಯ್ಯುವಾಗ ರಸ್ತೆತಡೆ ನಡೆಸಿ, ಸಂತ್ರಸ್ತ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡುವಂತೆ ಆಗ್ರಹಿಸಿದರು.

ಆದರೆ, ಈ ಸಾವಿನ ಬಗ್ಗೆ ಪೊಲೀಸರನ್ನು ಪ್ರಶ್ನಿಸಿದಾಗ, ಗೋವಿಂದ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ತಿಳಿಸಿದ್ದಾರೆ.

ಘಟನೆಯನ್ನು ಖಂಡಿಸಿ ಆರ್‌ಜೆಡಿ ಪ್ರತಿಭಟನೆ ನಡೆಸಿದ್ದು, ಸಂತ್ರಸ್ತ ಕುಟುಂಬಕ್ಕೆ ನ್ಯಾಯ ಒದಗಿಸಿಕೊಡುವಂತೆ ಆಗ್ರಹಿಸಿದೆ, ಆದರೆ ಇದುವರೆಗೂ ರಾಜ್ಯ ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ.

ಘಟನೆಯನ್ನು ನ್ಯಾಯಾಂಗ ತನಿಖೆಗೆ ಒಪ್ಪಿಸುವಂತೆ ಬಿಜೆಪಿ ನಾಯಕ ವ್ಯಾಸ ದೇವ್ ಆಗ್ರಹಿಸಿದ್ದಾರೆ.

ಓಬಿಸಿ ಮೀಸಲಾತಿ ಜಾಟ್ ಜನಾಂಗಕ್ಕೆ ಸದಾವಕಾಶ

ರೋಹ್ಟಕ್, ಸೆ. ೧೭- "ಗಾಳಿ ಬಂದಾಗ ತೂರಿಕೊಳ್ಳಬೇಕು" ಎಂಬಂತೆ ಜಾಟ್ ಸಮುದಾಯ ತಮ್ಮ ಬೇಡಿಕೆ ಈಡೇರಿಕೆಗೆ ಹಿಸ್ಸಾರ್ ಕ್ಷೇತ್ರದ ಉಪಚುನಾವಣೆಯನ್ನು ಬಳಸಿಕೊಳ್ಳುತ್ತಿದೆ.

ತಮ್ಮ ಸಮುದಾಯಕ್ಕೆ ಇತರೆ ಹಿಂದುಳಿದ ವರ್ಗಗಳ ಸ್ಥಾನ-ಮಾನ ನೀಡಬೇಕೆಂಬ ತಮ್ಮ ಬೇಡಿಕೆಯನ್ನು ಬೆಂಬಲಿಸುವ ಅಭ್ಯರ್ಥಿಗಳಿಗೆ ಈ ಚುನಾವಣೆಯಲ್ಲಿ ಬೆಂಬಲ ನೀಡುತ್ತೇವೆ ಎಂದು ಅಖಿಲ ಭಾರತೀಯ ಜಾಟ್ ಮಹಾಸಭಾ ಹೇಳಿದೆ.

ಇತರೆ ಹಿಂದುಳಿದ ವರ್ಗಗಳ ಸ್ಥಾನ-ಮಾನ ತಮ್ಮ ಸಮುದಾಯಕ್ಕೆ ನೀಡಬೇಕೆಂಬ ಬೇಡಿಕೆಗೆ ಜಾಟ್ ಸಮುದಾಯ ಬಹಳ ಹಿಂದಿನಿಂದಲೂ ಹೋರಾಟ ಮಾಡಿಕೊಳ್ಳುತ್ತ ಬಂದಿದೆ. ಇದೇ ಹಿನ್ನೆಲೆಯಲ್ಲಿಯೆ ಜಾಟ್ ಆರಕ್ಷಣ್ ಸಂಘರ್ಷ ಸಮಿತಿ, ರೈಲ್ವೆ ಹಳಿಗಳ ಮೇಲೆ ಪ್ರತಿಭಟನೆ ನಡೆಸುತ್ತ ಬಂದಿದೆ.

ಮೋದಿ ಉಪವಾಸ ಸತ್ಯಾಗ್ರಹದ ಚಪ್ಪರಕ್ಕೆ ₹21 ಲಕ್ಷ ದೇಣಿಗೆ

ಅಹ್ಮದಾಬಾದ್, ಸೆ. ೧೭- ಗುಜರಾತಿನ ಮುಸ್ಲಿಂ ವಾಣಿಜ್ಯೋದ್ಯಮಿ ಸಲೀಂ ಪಟೇಲ್ ಎಂಬುವರು ಮುಖ್ಯಮಂತ್ರಿ ನರೇಂದ್ರ ಮೋದಿಯ ಅತ್ಯಂತ ಪ್ರಿಯವಾದ ಯೋಜನೆ "ಕನ್ಯಾ ಕೇಲಾವನಿ"ಗೆ ಇತ್ತೀಚೆಗೆ 21 ಲಕ್ಷ ರೂ.ಗಳನ್ನು ದಾನವಾಗಿ ನೀಡಿದ್ದಾರೆ.

ಇದೇ ಸಲೀಮ್ ಅವರ ದಕ್ಷಿಣ ಗುಜರಾತ್‌ನ ಚಾಂಚ್‌ವೆಲ್ ಗ್ರಾಮದ ಸಂಬಂಧಿಕರು ಇಂದು ಮೋದಿ ಆರಂಭಿಸಲಿರುವ 3 ದಿನಗಳ ಸದ್ಭಾವನಾ ಉಪವಾಸಕ್ಕೆ ಸಾಥ್ ನೀಡಲಿದ್ದು, ಎಲ್ಲಾ 3 ದಿನಗಳೂ ಅವರ ಜತೆ ಇರಲಿದ್ದಾರೆ.

37 ವರ್ಷದ ಸಲೀಂ ಅವರ 60 ವರ್ಷದ ಮಾವ ಹನೀಫ್ ಪಟೇಲ್ ಅವರೂ ಉಪವಾಸದಲ್ಲಿ ಪಾಲ್ಗೊಂಡಿದ್ದಾರೆ.

ಮೋದಿ ಉಪವಾಸಕ್ಕೆ ಅತಿ ಹೆಚ್ಚು ಮುಸ್ಲಿಮರನ್ನು ಆಕರ್ಷಿಸಲು ಗುಜರಾತ್ ಬಿಜೆಪಿ ಎಲ್ಲಾ ರೀತಿಯಿಂದ ಯತ್ನಿಸಿದೆ.

ಇಂದು ಮೋದಿಯವರ ಉಪವಾಸಕ್ಕೆ ಬೆಂಬಲ ಸೂಚಿಸಲು ರಾಷ್ಟ್ರೀಯ ನಾಯಕರಾದ ಎಲ್.ಕೆ. ಅಡ್ವಾಣಿ ಮತ್ತು ಅರುಣ್ ಜೇಟ್ಲಿ ಅವರೊಂದಿಗೆ ಮುಖ್ತಾರ್ ಅಬ್ಬಾಸ್ ನಕ್ವಿ, ಸೈಯದ್ ಶಾನವಾಜ್ ಹುಸೇ